ಪಾಪ ಕಾರ್ಯದಲ್ಲಿ ಭಾಗಿಯಾಗಿರುವ ಪಾಪಿಷ್ಠನ ಹೆಸರು ಹೇಳಿ ಬಿಡು... ಪಾಪ ಕಾರ್ಯ ಮಾಡಿ ನಾಚಿ ಕಣ್ ಮರೆಸಿಕೊಂಡು ಬಹುಶಃ ಒಳಗೊಳಗೇ ಅಳುಕುತ್ತ ಮೂಕ ವೇದನೆ ಆತ ಪಡುತ್ತಲೂ ಇರಬಹುದು... ಹೇಡಿ... ಇಂತಹ ಗಂಡಸರೆಲ್ಲಾ ಹೇಡಿಗಳೇ... ಧೈರ್ಯವಿಲ್ಲದೆ ಮುಖ ಮುಚ್ಚಿಟ್ಟುಕೊಳ್ಳುವ ಅವನ ಹೆಸರನ್ನು ಮರ್ಯಾದೆ ಉಳಿಸುವ ಸಲುವಾಗಿ ನೀನು ಬಾಯಿಗೆ ಬೀಗ ಹಾಕಿಕೊಳ್ಳಬೇಕಿಲ್ಲ... ನಿನ್ನ ಬಾಯಿಂದಲೇ ಆ ಹೆಸರು ಹೊರಕ್ಕೆ ಹೋಗಿ ಬಿಡಲಿ...! ಆ ಸ್ವಾತಂತ್ರ ನೀನು ತಗೊ... ಅವನಿರುವ ಮರ್ಯಾದೆ ಮೇಲಂತಸ್ತಿನಿಂದ ಅವನು ಇಳಿದು ಹೋದರೂ ಸರಿ, ಕೆಟ್ಟ ಹೆಸರು ನಿನ್ನೊಡನೆ ಹಂಚಿಕೊಳ್ಳುವ ಪ್ರಾಮಾಣಿಕ ವ್ಯಕ್ತಿಯಾದರೂ ಸರಿ, ಅವನನ್ನು ಕಾಪಾಡಲಿ. ನೀನು ಜೀವನ ಪರ್ಯಂತ ನರಳಬೇಡ. ನಿನ್ನ ಮೌನ, ಆತನ ಒಳಗೊಂದು ಹೊರಗೊಂದು ಇರುವ ಮುಖಕ್ಕೆ ಮುಸುಕು ಹಾಕುತ್ತಿದೆ... ಆತನಿಗೂ ಕಹಿಯ ಅನುಭವ ಹಂಚು, ನಿನ್ನ ಬಾಳಿಗೆ ವಿಷ ಉಣಿಸಿ, ತಾನು ಕೆಟ್ಟ ಕೆಲಸ ಮಾಡೇ ಇಲ್ಲ ಎಂದು ತಲೆ ಎತ್ತಿ ಸಮಾಜದಲ್ಲಿ ಬೇರೆತಿರುವ ಅವನಿಗೆ ನಿಜದ ಬಿಡುಗಡೆ ಕೊಡು...' ಅವನ ಧ್ವನಿಯಲ್ಲಿ ಕೇಳಿಸಿಕೊಳ್ಳುವವರ ಹೃದಯ ಕಲಕುವ ಎಂದಿನ ಸ್ವಾಭಾವಿಕ ಆಕರ್ಷಣೆ ತುಂಬಿತ್ತು.

ಸಮ್ಮೋಹಕವಾದ ಅವನ ದನಿ ಅದೆಷ್ಟು ಹಿತಕರವಾಗುತ್ತೆಂದರೆ ಗಂಗಾಳ ಮಡಿಲಿನ ಕೂಸೂ ಅವನ ಮಾತನ್ನೇ ಆಲಿಸುತ್ತ, ಅವನತ್ತವೇ ಕಣ್ಣರಳಿಸಿ ನೋಡಿತು. ಆ ಮುಗ್ಧ ಮಗುವಿನ ನೋಟಕ್ಕೆ ಮಾಂತ್ರಿಕ ಶಕ್ತಿ ಇದ್ದಂತೆ, ಪ್ರಸಾದ್ ಅವನೇ ಅರಿಯದೆ, ಆ ಪುಟ್ಟ ಎಳೇ ಮಾಂಸದ ಮುದ್ದೆಯಂತಿದ್ದ ಮಗುವಿನ ಕೈಯನ್ನು ತನ್ನ ಮೂಗಿನ ಬಳಿ ತಂದುಕೊಂಡು ಆಸ್ವಾದಿಸಿದ– ಸಣ್ಣ ಎಳೇ ಕಂದಗಳ ತ್ವಚೆಯ ಸುಗಂಧ ಯಾವ ಫ್ರಾನ್ಸ್, ಅರೇಬಿಯಾ ಪರಿಮಳ ದ್ರವ್ಯಕ್ಕೂ ಬರುವಂತಿಲ್ಲ. ಆ ಗಂಧ ಕರುಳು ತೊಯ್ಯಿಸಿ, ಹೃದಯ ಅರಳಿಸಿ ಪ್ರೀತಿ ಸೆಳೆದುಕೊಳ್ಳಲೆಂದೇ ಪ್ರಕೃತಿ ಹಸಿಗೂಸಿನ ಮೈಗೆ ಸವರಿರುತ್ತದೆ.

ಪ್ರಸಾದನ ಮಧ್ಯಸ್ಥಿಕೆಗೆ ಬಾಗಿ, ಗಂಗಾ ಮನಬಿಚ್ಚಿ ಮಾತಾಡುವಳೇನೊ ಎಂದು ಸುನಂದ ಬನ್ನಪ್ಪ ಮತ್ತು ಕೆಂಪಣ್ಣ ಇಬ್ಬರೂ ಕುತೂಹಲದಿಂದ ಕಾದರು.

ಗಂಗಾ ತುಟಿಯನ್ನೇನೋ ಬಿಚ್ಚಿದಳು. ಮಾತೂ ಹೊರ ಬೀಳತೊಡಗಿತು. ಆದರವಳು. 'ಇಲ್ಲ... ನಾ ಹೇಳಾ ಹಂಗಿಲ್ಲ...' ಎನ್ನುತ್ತ ಮೊದಲು ಹಿರಿಯರಿಬ್ಬರನ್ನೂ ನಂತರದ ಪ್ರಸಾದನನ್ನು ನೋಡುತ್ತ ಅಂದಳು.

'ಅದು... ಆ ಹೆಸ್ರು... ಎದೀ ಒಳ್ಗೆ ಗಟ್ಟಾಗಿ ಕುಂತ್ಕೈತಿ... ಅಳ್ಳಾಡಿಸಲಿಕ್ಕಾಗ್ದು... ನೋವು ನಾ ಒಬ್ಬಾಕೀನೇ ಹೊತ್ಕಳ್ಳಿಕ್ಕೆ ಹತ್ತೀನಿ... ಎಂದೂ ಬ್ಯಾರೇವ್ರಿಗೆ ಹೇಳೂದಿಲ್ಲ... ನನ್ನ ಚಮ್ಡಿ... ನನ್ನ ತೆಪ್ಪು ಹೊಟ್ಟೇಲಿ ಹಾಕ್ಕೊಳ್ಳಿ... ಮತ್ತೆ ಈ ಸುದ್ದಿ ಎತ್ಲಿಕ್ ಹೋಗ್ಬೇಡ್ರಿ...' ಎಂದು ಕಣ್ಣು ಮುಚ್ಚಿಕೊಂಡು, ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸಿ, ಗಟ್ಟಿಯಾದ ಧ್ವನಿಯಲ್ಲಿ ಸ್ಪಷ್ಟವಾಗಿ ಉಚ್ಚರಿಸಿದಳು.

'ನನ್ನ ಕೂಸಿಗೆ ದೇವ್ರೇ ತಂದಿ... ನರ ಮನುಷ್ಯ ಅಲ್ಲ...! ಕೂಸನ್ನ ಆ ದೇವ್ರೇ ಕೈ ಹಿಡಿದು ನಡೆಸ್ಕೋತಾನೆ...'

ಎಲ್ಲರೂ ಗಪ್ಪಾಗಿಬಿಟ್ಟರು... ಪ್ರಸಾದ ಮಾತ್ರಾ ಮಾತಾಡಿದ, 'ಈ ... ಇವ್ಳು... ಭೂತಾಯಿಯ ತಾಳ್ಮೆ ಉಳ್ಳವಳು... ಉದಾರ ಬುದ್ಧಿ ಇದ್ದೂ ಗಟ್ಟಿಗಳು... ಅಂತರಾಳದಲ್ಲಿ ಕೂಸಿನ ತಂದೆಯ ಹೆಸರು ಮುಚ್ಚಿಟ್ಟು ಕೊಂಡು ಬಿಟ್ಟಿದ್ದಾಳೆ... ಎಂದೂ ಹೊರಗೆ ಬರಲು ಆಗದಂತೆ ಬಂಡೆ ಏರಿಸಿಕೊಂಡಿದ್ದಾಳೆ...! ನಿಮ್ಮ ಪ್ರಯತ್ನ ಫಲಿಸೋದಿಲ್ಲ...'

ಬಂದವರು ಹೊರಟು ನಿಂತರು. ಗಂಗೆ ಮತ್ತೆ ಕೈ ಜೋಡಿಸಿ ನಮಸ್ಕಾರ ಮಾಡುತ್ತ.

'ಬರ್‍ತೀನ್ರವ್ವಾ... ಕೈ ಮುಗೀತೀನಿ...' ಎಂದು ಹೇಳುತ್ತಿರುವಾಗ ಮಗು ಏಕೊ ಚೀರಿ ಅಳಲಾರಂಭಿಸಿತು.

ಸುನಂದಮ್ಮ ಗಾಬರಿಯಿಂದ, 'ಗಂಗಾ... ನೋಡು ಮಗೂಗೆ ಏನಾಯ್ತು...? ಏನಾದ್ರೂ ಚುಚ್ಚಿತೆ...? ನಿನ್ನ ಕುಪ್ಪುಸದಲ್ಲಿ ಪಿನ್ನು ಏನಾದ್ರೂ ಹಾಕಿದ್ದೇನು...?'

ಗಂಗೆಯ ಕುಪ್ಪುಸದಲ್ಲಿ ಪಿನ್ನಿರಲಿ, ಗುಂಡಿ ಸಹಾ ಇರಲಿಲ್ಲ. ಬರೇ ಒಂದು ಗಂಟು ಬಿಗಿದುಕೊಳ್ಳುತ್ತಿದ್ದಳು.

ಸುನಂದಮ್ಮನವರ ಮಾತಿಗೆ ಉತ್ತರ ಕೊಡುವ ಅವಶ್ಯಕತೆ ಗಂಗೆಗೆ ಕಾಣಲಿಲ್ಲ.

ಮಗೂನ ರಮಿಸುತ್ತ,

'ಅಳಬೇಡ... ನನ ಕಂದಾ... ಅಳಬೇಡ...' ಎಂದಾಗ ಅವಳು ಬಿಸಿಲಿಗೆ ಸಾರ ಕಳೆದುಕೊಂಡ ಸೊಪ್ಪಿನಂತೆ ಬಾಡಿ ಹೋಗಿದ್ದಳು.

**4**

ಸುನಂದ ಬನ್ನಪ್ಪನವರ ಮನೆಯಿಂದ ಬಂದ ಮೇಲೆ ಗಂಗಾ ತೀರಾ ಸುಸ್ತಾಗಿ ಬಿಟ್ಟಳು. ಹಸಿವಿನಿಂದ ಅಳುವ ಮಗುವಿಗೆ ಹೊಟ್ಟೆ ತುಂಬುವಷ್ಟು ಹಾಲೂ ಅದೇಕೊ ಇಳಿಯಲಿಲ್ಲ. ಹಸಿವು ಇಂಗದೆ ಅತ್ತು, ಅತ್ತು ಕೂಸು ಸೊರಗಿ ಹಾಗೇ ನಿದ್ದೆಗೆ ಹೋಗಿಬಿಟ್ಟಿತು. ಅವಳಿಗೆ ನಿದ್ದೆ ಹತ್ತಲಿಲ್ಲ. ಮುಚ್ಚಳ ಭದ್ರವಾಗಿ ಮುಚ್ಚಿಟ್ಟ ಹುಳಿತ ಮೊಸರಿಟ್ಟ ಪಾತ್ರೆಯಂತೆ ತಲೆಯಾಗಿತ್ತು. ಹುಳಿಯ ಕೀಟ ಹುಟ್ಟಿಕೊಂಡಂತೆ ತಲೆಯೊಳಗೆ ಮುಳು ಮುಳು ಮಾಡುತ್ತಿತ್ತು.

ಬೆಳಗಾದಾಗ ತನ್ನ ಚಾಪೆಯಿಂದ ಎದ್ದೇಳುವುದಕ್ಕೂ ಚೈತನ್ಯವಿರಲಿಲ್ಲ. ಮಗು ಅತ್ತಾಗಲೆಲ್ಲಾ ಹಾಲುಡಿಸುವ ಯತ್ನ ಮಾಡುವುದಷ್ಟೇ ಅವಳ ಚಲನೆಯಾಯಿತು. ದೇವಸ್ಥಾನದ ಮುಂದೆ ನೀರು ಚಿಮುಕಿಸಿ ರಂಗೋಲಿ ಇಡಬೇಕಾಗಿದ್ದ ತನ್ನ ಎಂದಿನ ಕರ್ತವ್ಯಕ್ಕೂ ಅವಳು ಹೊರಡದೆ ಜಡವಾಗಿಬಿಟ್ಟಳು.

ರಂಗೋಲಿ ಇಡದ್ದನ್ನು ಕಂಡ ಹೂವಾಡಿಗರು ಒಬ್ಬರಿಗೊಬ್ಬರು ಮಾತಾಡಿಕೊಂಡರು.

'ಇದ್ಯಾನು ಬಂದದೆ ಈ ಗಂಗೀಗೆ... ಇಷ್ಟು ಟೇಂ ಆದ್ರೂ ಇನ್ನೂ ಲಕ್ಷಣವಾಗಿ ರಂಗೋಲಿ ಇಡ್ಲೆ ಅದ್ಯಾನು ಮಾಡ್ತಿದಾಳು!?'

ಆ ವೇಳೆಗಾಗಲೇ ಶೀನಯ್ಯನೂ ಬಂದಾಯಿತು. ದೇವಸ್ಥಾನದ ಮುಂದೆ ಇನ್ನೂ ನೆಲ ಒಣಗಿಯೇ ಇದೆ. ನಿನ್ನೆ ರಂಗೋಲಿ ಮಾಸಿ ಹೋಗಿದೆ. ಅವನಿಗೆ ಸಿಟ್ಟು ಬಂದಿತು.

'ಇದೇನು ಇಷ್ಟು ಹೊತ್ತಾದ್ರೂ ದೇವಸ್ಥಾನದ ಮುಂದೆ ರಂಗೋಲಿ ಇಟ್ಟಿಲ್ಲ. ಈ ಗಂಗಿಗೇನಾಯ್ತು...? ಸ್ವಲ್ಪನಾದ್ರೂ ಜವಾಬ್ದಾರಿ ಬೇಡ್ವೇನು...?' ಹೂ ಮಾರುವವರೂ ಅವನಿಗೆ ಹಿಮ್ಮೇಳ ನುಡಿಸಿದರು,

'ಹೌದು ಸ್ವಾಮೇರಾ... ನಾವೂ ಅದ್ನೇ ಅನ್ಕೋತಿದ್ವಿ ಇಷ್ಟೊತ್ತಿಗೆ ಲಕ್ಷಣವಾಗಿ ರಂಗೋಲಿ ನೋಡ್ತಾ, ನಾವು ಹೂವು ರೆಡಿ ಮಾಡ್ಕೊಂಡು ಕೂತ್ಕೋತಿದ್ವಿ... ಈಗ ನೋಡಿ ಹೇಗಿದೆ...? ಮೈಲಿಗೆ ಹಾಂಗೆ ಇದೆ.'

'ಇರ್‍ಲಿ... ಯಾರ್‍ಗಾದ್ರೂ ಹೇಳಿ ರಂಗೋಲಿ ಇಡಸ್ತೀನಿ... ಗಂಗೆಗೆ ಏನಾದ್ರೂ ಹುಶಾರು ತಪ್ಪಿದ್ಯೋ ಏನೊ... ಹೋಗಿ ನೋಡ್ತೀನಿ...'

ಶೀನಣ್ಣ ಹೋಗಿ 'ಗಂಗಾ...' ಎಂದು ಕರೆದಾಗ, ಗಂಗೆ ಸ್ವಲ್ಪ ತಡವಾಗಿ ಹೊರಗೆ ಬಂದಳು. ಒಂದೇ ರಾತ್ರಿಯಲ್ಲಿ ಅವಳ ಮೋರೆ ಅದೆಷ್ಟು ಕಂಗೆಟ್ಟಿತ್ತೆಂದರೆ ಶೀನಪ್ಪನಿಗೆ ಗಾಬರಿ ತಂದಿತು.

ಮನಸ್ಸಿನ ಪ್ರತಿಬಿಂಬ ಮುಖ. ಮನಸ್ಸಿನಲ್ಲಿ ಮಗುವನ್ನೂ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಕೆಟ್ಟ ಆಲೋಚನೆ ತುಂಬಿಕೊಂಡು ಬಂದು, ಆ ಮುಖ ಲಕ್ಷಣವನ್ನೇ ಬದ್ಲಾಯಿಸಿಬಿಟ್ಟಿತ್ತು. ಆ ಆಲೋಚನೆ ತೀವ್ರ ಆಗಿದ್ದಾಗಲೇ ಶೀನಣ್ಣನ ಕರೆ ಕೇಳಿ ಬಂದು, ಕಿವಿ ಪಟಲಕ್ಕೆ ಸೂಜಿ ಚುಚ್ಚಿದಂತೆ ಆಗಿ, ಚಿಲ್ಲ್ ಎನ್ನಿಸಿತು. ಅವನು ಆ ಗಳಿಗೆಯಲ್ಲಿ ಅಲ್ಲಿ ಬಂದು ಅವಳನ್ನು ಕೂಗದೆ ಹೋಗಿದ್ದಿದ್ದಲ್ಲಿ ಇನ್ನು ಕೆಲವೇ ನಿಮಿಷಗಳಲ್ಲಿ ಅವಳ ನಿರ್ಧಾರ ಕಾರ್ಯ ರೂಪಕ್ಕೆ ತಂದುಬಿಡುತ್ತಿದ್ದಳೊ ಏನೊ..!

'ಗಂಗಾ...' ಅನ್ನೊ ಒಂದು ಕೂಗು ಅವಳ ಮತ್ತು ಆ ಕೂಸಿನ ಸಾವನ್ನು ತಪ್ಪಿಸಿಬಿಟ್ಟಿತು!

ಗಂಗಾಳ ಕಳಾಹೀನ ಮುಖವನ್ನು ಕಂಡು ಆತ ಕೇಳಿದ, 'ಯಾಕೆ ಗಂಗಾ... ಹುಶಾರಿಲ್ಲವೆ?... ಮುಖ ಯಾಕೆ ಹೀಗೆ ರಾವು ಬಡಿದ ಹಾಗಿದೆ... ಬೆಳಗದ್ದು ದೇವಸ್ಥಾನದ ಮುಂದೆ ರಂಗೋಲಿ ಸಹಾ ಇಡೋಕೆ ಹೋಗಿಲ್ಲ. ಏನಾಯ್ತು ನಿಂಗೆ...?'

'ಮೈಗೆ ಆರಾಮಿಲ್ರೀ... ಜಡ್ಡಾಗೈದೆ... ಕೂಸಿಗೂ...'

'ಏನಾಗಿದೆ...?'

'ತಿಳೀವಲ್ದು... ರಾತ್ರಿ ಇಡೀ ನಾನು ನಿದ್ದಿ ಮಾಡಿಲ್ರೀ... ಕೂಸು ಇಡೀ ರಾತ್ರಿ ಒದ್ದಾಡ್ತಿಕ್ ಹತ್ತಿತು... ಅದಕ್ಕೇನಾಯ್ತೊ ಏನೊ...'

'ಇದೇನಿದು...? ಇದ್ದಕ್ಕಿದ್ದಂತೆ ಏನಾಯ್ತು...? ನಿನ್ನೆ ಇಬ್ರೂ ಚೆನ್ನಾಗೇ ಇದ್ರಿ...? ಕೂಸಿನ ಮಾತು ಹಾಗಿರ್‍ಲಿ... ಎಳೇ ಕೂಸು, ಹೊಟ್ಟೆ ಏನಾದ್ರೂ ಕೆಟ್ಟಿರಬೇಕು... ಆದ್ರೆ ನಿನ್ನ ನೋಡದ್ರೆ... ಒಂದೇ ದಿನಕ್ಕೆ ಸಖತ್ ಕಾಯಿಲೆ ಆದ್ಹಾಗೆ ಆಗ್ಬಿಟ್ಟಿದ್ದೀಯಲ್ಲಾ...! ಮನ್ಸಿಗೇನಾದ್ರೂ ಬ್ಯಾಸರ ಮಾಡ್ಕೊಂಡಿದೀ ಏನು? ಎಲ್ರೂ ನಿನ್ನ ಬಗ್ಗೆ ಕೆಟ್ಟದಾಗಿ ಮಾತಾಡೋದು ಕೇಳಿಸ್ಕೊಂಡು